

‘ಮನುಷ್ಯಜಾತಿ ತಾನೊಂದೆ ವಲಂ’ ಎಂಬ ಸಾರ್ವಕಾಲಿಕ ತತ್ತ್ವವೊಂದನ್ನು ಪ್ರತಿಪಾದಿಸಿದ ಪಂಪ ಕನ್ನಡದ ಆದಿಕವಿ. ಅಂದರೆ ಅವನಿಗೂ ಪೂರ್ವದಲ್ಲಿ ಕವಿಗಳು, ಸಾಹಿತ್ಯ ಕೃತಿಗಳು ಇರಲಿಲ್ಲವೆಂದು ಅರ್ಥವಲ್ಲ. ನಮಗೆ ದೊರೆತಿರುವ ಮೊದಲ ಕಾವ್ಯಕೃತಿಗಳೆಂದರೆ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ. ಅಷ್ಟೇ ಅಲ್ಲದೆ ಅವನ ಕೃತಿಗಳು ಮುಂದಿನ ಜೈನ ಕವಿಗಳಿಗೆ ಹೊಸ ಮಾರ್ಗವನ್ನು ತೋರಿಸಿಕೊಟ್ಟವು. ಹೀಗಾಗಿ, ಆತ ಆದಿ ಕವಿಯೂ ಹೌದು; ಮಹಾಕವಿಯೂ ಹೌದು.

ಪಂಪನ ಕಾಲ ಹತ್ತನೆಯ ಶತಮಾನ. ಇದನ್ನು ಪಂಪಯುಗ ಎಂದೂ ಕರೆಯುವುದುಂಟು. ಪಂಪ ತನ್ನ ಎರಡೂ ಗ್ರಂಥಗಳಲ್ಲಿ ತನ್ನ ವೃತ್ತಾಂತವನ್ನು ಹೇಳಿಕೊಂಡಿದ್ದಾನೆ. ಆತನ ಪೂರ್ವಿಕರು ವೆಂಗಿಮಂಡಲ ಪ್ರಾಂತದ ವೆಂಗಿಪಳು ನಾಡಿನವರು; ವೈದಿಕರು. ಭೀಮಪಯ್ಯ ಪಂಪನ ತಂದೆ;